## ನಿವೇದನೆ

# ವರದಕ್ಷಿಣೆ ಪಿಡುಗು: ಜೀವವಿರೋಧಿ ನಡೆ

ಮಹಿಳೆಯರ ಕುರಿತು ನಮ್ಮ ಸಾಮಾಜಿಕ ಧೋರಣೆಯೇ ಆಮೂಲಾಗ್ರ ಬದಲಾವಣೆಗೆ ಒಳಗಾಗಬೇಕಾದ ಅಗತ್ಯ ಇದೆ. ಸಿನಿಮಾ, ಜಾಹೀರಾತು, ಮಾಧ್ಯಮ ಒಳಗೊಂಡಂತೆ ಕುಟುಂಬದವರೆಗೂ ಇದು ಅನ್ವಯಿಸುತ್ತದೆ.

ಸಾಮಾಜಿಕ ಅನಿಷ್ಟಗಳನ್ನು ತೊಲಗಿಸಲು ಸಾಧನ ಆಗಬಲ್ಲವು ಎಂದು ನಾವು ಗುರುತಿಸಿರುವ, ಭಾವಿಸಿರುವ ಎಷ್ಟೋ ಸಂಗತಿಗಳು ನಿವಾರಣೆಯ ನೆಲೆಯಲ್ಲಿ ಪರಿಣಾಮಕಾರಿ ಮದ್ದು ಆಗುವುದರಲ್ಲಿ ವಿಫಲವಾಗಿರುವುದುಂಟು. ಶಿಕ್ಷಣದಿಂದ, ಉದ್ಯೋಗ ಅವಕಾಶಗಳಿಂದ, ಹಕ್ಕುಗಳ ಬಗೆಗೆ ಜಾಗೃತಿ ಮೂಡಿಸುವುದರಿಂದ, ಸಾಮಾಜಿಕ ಅಭಿವೃದ್ಧಿಯಿಂದ ಇಂತಹ ಪಿಡುಗುಗಳನ್ನು ಹೊಡೆದೋಡಿಸಬಹುದು ಎಂಬುದು ಅನೇಕ ವಿಚಾರಗಳಲ್ಲಿ ಸುಳ್ಳಾದಂತೆ ಕಾಣಿಸುತ್ತದೆ.

ಅಭಿವೃದ್ಧಿ ಸೂಚ್ಯಂಕಗಳಲ್ಲಿ ದೇಶದ ಉಳಿದೆಲ್ಲ ರಾಜ್ಯಗಳಿಗಿಂತ ಬಹಳ ಮುಂದಿರುವ ಕೇರಳದಿಂದ ವರದಿಯಾದ ವರದಕ್ಷಿಣೆ ಪ್ರಕರಣಗಳು ಈ ನೆಲೆಯಲ್ಲಿ ಒಂದು ಕ್ಷಣ ಯೋಚಿಸುವಂತೆ ಮಾಡಿದವು. ಈಚೆಗೆ ಒಂದೇ ವಾರದ ಅವಧಿಯಲ್ಲಿ ಮೂವರು ಹೆಣ್ಣುಮಕ್ಕಳು ವರದಕ್ಷಿಣೆ ಪಿಡುಗಿಗೆ ಬಲಿಯಾದುದು ಸುದ್ದಿಯಾಗಿತ್ತು. ಮೂವರೂ ಯುವ ಗೃಹಿಣಿಯರು. ಗಂಡ, ಅತ್ತೆ ಅಥವಾ ಗಂಡನ ಮನೆಯವರ ಕಿರುಕುಳದ ಹಿನ್ನೆಲೆಯಲ್ಲಿ ಈ ದಾರುಣ ಸಾವುಗಳು ಸಂಭವಿಸಿವೆ ಎಂದು ವರದಿಯಾಗಿದೆ.

ಮಹಿಳಾ ಸಾಕ್ಷರತೆಯಲ್ಲಿ, ಲಿಂಗಾನುಪಾತದಲ್ಲಿ ಮಾದರಿ ರಾಜ್ಯವಾಗಿದೆ ಕೇರಳ. ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಬಳುವಳಿಯೂ ಬೆನ್ನಿಗಿದೆ. ಉದ್ಯೋಗಕ್ಕಾಗಿ ಬೇರೆ ರಾಜ್ಯಗಳಿಗೆ ಮತ್ತು ದೇಶದಿಂದ ಹೊರಗೆ ದುಡಿಯಲು ಹೋಗುವವರ ಸಂಖ್ಯೆಯೂ ಹೆಚ್ಚು. ನಗರೀಕರಣ ಕೂಡ ಅಧಿಕ. ಹೀಗಿದ್ದೂ ವರದಕ್ಷಿಣೆಯಂತಹ ಪಿಡುಗು ಈ ಕಾಲಘಟ್ಟದಲ್ಲೂ ತಾಂಡವವಾಡುತ್ತಿರುವುದು ಸೋಜಿಗದ ಸಂಗತಿ! ಈ ವಿರೋಧಾಭಾಸವು ಬೇರೆ ಬೇರೆ ಬಗೆಯ ಪ್ರಶ್ನೆಗಳಿಗೆ ಕಾರಣವಾಗುತ್ತದೆ.

ಈ ಪಿಡುಗಿಗೆ ಶಿಕ್ಷಣ ತಡೆಗೋಡೆ ಆಗಲಿಲ್ಲ. ನಿವಾರಣೆಗೆ ಉದ್ಯೋಗ ಅವಕಾಶಗಳು ನೆರವಾಗಲಿಲ್ಲ. ವ್ಯಕ್ತಿ–ಕುಟುಂಬಗಳ ಯೋಚನಾ ಕ್ರಮವನ್ನು ಸಾಮಾಜಿಕ ಅಭಿವೃದ್ಧಿಯು ಬದಲಿಸಲಿಲ್ಲ. ಭೌತಿಕ ಬೆಳವಣಿಗೆಯು ಅಂತರಂಗವನ್ನು ಬೆಳಗಲಿಲ್ಲ. ಪರಿಹಾರ ಆಗಬಹುದು ಎಂದು ಭಾವಿಸಿದ್ದ ಸಾಧನೋಪಾಯಗಳು ಪರಿಹಾರಕ್ಕೆ ಪೂರಕವಾಗಿ ಒದಗಿಬಂದಿಲ್ಲ ಎಂಬುದರ ಕಡೆ ಕೇರಳದ ವಿದ್ಯಮಾನಗಳು ಬೊಟ್ಟು ಮಾಡುತ್ತವೆ. ಕೇರಳದಲ್ಲಿ ಧಾರ್ಮಿಕತೆ ತುಲನಾತ್ಮಕವಾಗಿ ತುಸು ಹೆಚ್ಚು ಎಂದೇ ಹೇಳಬಹುದು. ಆದರೆ, ಮನುಷ್ಯನ ದುರಾಸೆ ನಿಗ್ರಹಿಸಲು ಅದಕ್ಕೂ ಸಾಧ್ಯವಾಗಿಲ್ಲ!

ಲಿಂಗಸಮಾನತೆಯ ಸಂಸ್ಕೃತಿಯನ್ನು ಮಕ್ಕಳ ಮನಸ್ಸಿನಾಳಕ್ಕೆ ಇಳಿಸುವ ಸಲುವಾಗಿ ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಿಸಲಾಗುವುದು ಎಂದು ಕೇರಳ ಸರ್ಕಾರ ಹೇಳಿದೆ. 'ಮಹಿಳೆಯರಿಗೆ ಅಗೌರವ ತೋರುವ ಪದಗಳು ಮತ್ತು ನುಡಿಗಟ್ಟುಗಳನ್ನು ತೆಗೆದುಹಾಕಲಾಗುವುದು. ನಮ್ಮ ಶಾಲಾ ಕಾಲೇಜುಗಳನ್ನು ಲಿಂಗಸಮಾನತೆ ಮತ್ತು ಸಮಾನ ಹಕ್ಕುಗಳನ್ನು ಸಾಕಾರಗೊಳಿಸುವುದಕ್ಕೆ ಪೂರಕವಾದ ತಾಣಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈಚೆಗೆ ಹೇಳಿದ್ದಾರೆ.

ಲಿಂಗಸಮಾನತೆ ಸಾರುವ ಅಂಶಗಳನ್ನು ಪಠ್ಯಪುಸ್ತಕಗಳಲ್ಲಿ ಅವಳವಡಿಸುವುದರ ಬಗೆಗೆ ಯಾರದೂ ತಕರಾರು ಇಲ್ಲ. ಇದೊಂದು ಒಳ್ಳೆಯ ಉಪಕ್ರಮ. ಮಕ್ಕಳಿಗೆ ಹೇಳುವ ಕಥೆಗಳು, ತೋರಿಸುವ ಚಿತ್ರಗಳು, ನೀಡುವ ಉದಾಹರಣೆಗಳು... ಎಲ್ಲವೂ ಬಹುಮಟ್ಟಿಗೆ ಪುರುಷಪ್ರಧಾನ ವ್ಯವಸ್ಥೆಯ ಪಡಿಯಚ್ಚು ಆಗಿರುತ್ತವೆ. ಇದು ಬದಲಾಗಬೇಕು. ಆದರೆ, ಮಕ್ಕಳು ಓದುವ ಪುಸ್ತಕಗಳನ್ನಷ್ಟೆ ಸ್ಯಾನಿಟೈಸ್ ಮಾಡಿದರೆ ಸಾಲದು. ಮಹಿಳೆಯರ ಕುರಿತು ನಮ್ಮ ಸಾಮಾಜಿಕ ಧೋರಣೆಯೇ ಆಮೂಲಾಗ್ರ ಬದಲಾವಣೆಗೆ ಒಳಗಾಗಬೇಕಾದ ಅಗತ್ಯ ಇದೆ. ಸಿನಿಮಾ, ಜಾಹೀರಾತು, ಮಾಧ್ಯಮ ಒಳಗೊಂಡಂತೆ ಕುಟುಂಬದವರೆಗೂ ಇದು ಅನ್ವಯಿಸುತ್ತದೆ.

ಮಹಿಳೆಯರ ಬಗೆಗಿನ ತಾರತಮ್ಯಕ್ಕೆ ಸಂಬಂಧಿಸಿದ ಬೇರು ಬಹಳ ಆಳಕ್ಕೆ ಇಳಿದಿದೆ. ಆ ಬೇರನ್ನು ಹಿಡಿದು ಜಗ್ಗಿಸಹೊರಟರೆ ಧರ್ಮ, ಸಂಸ್ಕೃತಿ, ಪರಂಪರೆ, ಮನೆತನ, ಗೌರವ, ಮರ್ಯಾದೆಗಳ ಹೆಸರಿನಲ್ಲಿ ಗುರಾಣಿಗಳನ್ನು ಅಡ್ಡ ಹಿಡಿದು ಯಥಾಸ್ಥಿತಿಯನ್ನು ಕಾಯುತ್ತವೆ ಪಟ್ಟಭದ್ರ ಹಿತಾಸಕ್ತಿಗಳು. ಈ ಬಗೆಯ ವಿದ್ಯಮಾನಗಳ ಹಿಂದೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನೆಲೆಗಳಲ್ಲಿ ಹೆಣ್ಣಿನ ಸ್ಥಾನಮಾನವನ್ನು ತನ್ನಿಚ್ಛೆಗೆ ಅನುಸಾರ ಬಗ್ಗಿಸಿ ನಿಯಂತ್ರಿಸುವ ಪುರುಷಪ್ರಧಾನ ಹುನ್ನಾರದ ನೆರಳೇ ಇಣುಕುತ್ತದೆ.

ಆದಕಾರಣ, ಈ ಸಾಮಾಜಿಕ ಅನಿಷ್ಟಗಳ ಜಟಿಲ ಸ್ವರೂಪದ ಬಗೆಗೆ ಹೊಸದಾಗಿ ಅಧ್ಯಯನಗಳು ಆಗಬೇಕು. ಲಗಾಮು ಹಾಕಲು ಇರುವ ನೈತಿಕ ನೆಲೆಗಳನ್ನು ಶೋಧಿಸಬೇಕು. ಆರ್ಥಿಕ ಆಯಾಮಗಳನ್ನು ಪರಿಹಾರಸೂತ್ರದ ಭಾಗವಾಗಿಸುವ ಕುರಿತು ಚಿಂತಿಸಬೇಕು. ವರದಕ್ಷಿಣೆ ಪಿಡುಗು ಯಾವುದೋ ಒಂದು ಜಾತಿ, ಪ್ರದೇಶ, ರಾಜ್ಯಕ್ಕೆ ಸೀಮಿತವಲ್ಲ. ಈ ಪಿಡುಗಿನ ಕಬಂಧಬಾಹು ದೇಶದ ಮೂಲೆಮೂಲೆಗೂ ಚಾಚಿದೆ. ಈ ಜೀವವಿರೋಧಿ ನಡೆಯನ್ನು ಕಾನೂನು–ಕಟ್ಟಲೆಗಳಿಂದ ಮಾತ್ರವೇ ಕಟ್ಟಿಹಾಕಲಾಗದು. ಮಿದುಳಿಗೆ ಅಂಟಿರುವ ಜಿಡ್ಡು ತೊಳೆಯುವ ಕೆಲಸಕ್ಕೆ ವ್ಯಕ್ತಿ, ಕುಟುಂಬ, ಸಮುದಾಯ ಮತ್ತು ಎಲ್ಲ ಬಗೆಯ ಸಂಘ–ಸಂಸ್ಥೆಗಳು ಕಟಿಬದ್ಧತೆಯಿಂದ ಕೈಜೋಡಿಸಬೇಕು.

**■ ಎನ್. ಉದಯಕುಮಾರ್**



ಈಶ್ವರ್